


## ಲೇಡೀಸ್ ಸ್ಪೆಷಲ್

ಈಗ ಪ್ರತಿದಿನವೂ ಹೊಸ ಹೊಸ ಸಾಫ್ಟ್‌ವೇರ್‌ಗಳು ಅಂತರ್ಜಾಲದ ಜಾಗತಿಕ ಅಂಗಡಿಯೊಳಗೆ ಕೂರುತ್ತಲೇ ಇರುತ್ತವೆ. ನಮ್ಮ ಮೊಬೈಲ್‌ನಲ್ಲಿ ಈಗಾಗಲೇ ಇರುವ ಸಾಫ್ಟ್‌ವೇರ್‌ಗಳನ್ನು ಕೂಡ ಆಗಾಗ ಅಪ್‌ಡೇಟ್ ಮಾಡಿಕೊಳ್ಳುತ್ತಲೇ ಇರಬೇಕು. ಇಲ್ಲದಿದ್ದರೆ ನಾವು ಔಟ್‌ಆಫ್‌ಡೇಟ್ ಆಗಿಬಿಡುತ್ತೇವೆ. ಮಹಿಳಾವಾದವನ್ನೂ, ನಮ್ಮ ಬದಲಾಗುತ್ತಿರುವ ಸಮಾಜದ ವ್ಯವಸ್ಥೆಯೊಳಗಿನ ಇಂಥದ್ದೇ ಒಂದು ಸಾಫ್ಟ್‌ವೇರ್‌ಗೆ ಹೋಲಿಸಬಹುದು. ಈ ಸಾಫ್ಟ್‌ವೇರ್, ನಮ್ಮ ವ್ಯವಸ್ಥೆಯ ಸರಾಗ ಕಾರ್ಯನಿರ್ವಹಣೆಗೆ ಮತ್ತು ಮಹಿಳಾ ಶೋಷಣೆಯ ವಿಮೋಚನೆಗೆ ಅತ್ಯಗತ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸುತ್ತಲಿನ ಸಮಾಜ ಬದಲಾದಂತೆ ಆ ಸಮಾಜಕ್ಕೆ, ಅದರ ಅಗತ್ಯ, ಸನ್ನಿವೇಶ, ಜೀವನಶೈಲಿಗೆ ತಕ್ಕಂತೆ ಮಹಿಳಾವಾದವನ್ನೂ ಅಪ್‌ಡೇಟ್ ಮಾಡಿಕೊಳ್ಳುತ್ತಿರಬೇಕು. ಇಲ್ಲದಿದ್ದರೆ ಅದು ನಮ್ಮ ಇಂದಿನ ಬದುಕಿಗೆ ಅನ್ವಯಿಸಿಕೊಳ್ಳಲಾಗದ ಸವಕಲು ಸಲಕರಣೆಯಾಗಿಬಿಡುತ್ತದೆ. ಮಹಿಳಾವಾದದ ಹೊಸ ಪರಿಭಾಷೆಯ, ಅಪ್‌ಡೇಟೆಡ್ ವರ್ಷನ್ ಬಂದಿದೆ ಎನ್ನುವುದನ್ನು ಪರಿಚಯಿಸುವ ಪ್ರಯತ್ನವನ್ನು ಈ ಸಂಚಿಕೆ ಮಾಡಿದೆ. ಇದರಲ್ಲಿನ ಬಹುತೇಕ ಎಲ್ಲ ಬರಹಗಳೂ ಆ ಅಪ್‌ಡೇಟೆಡ್ ವರ್ಷನ್‌ನ ಲಕ್ಷಣಗಳಂತೆಯೇ ತೋರುತ್ತವೆ. ಇಂಥ ಅಪ್‌ಗ್ರೇಡೇಶನ್ ಖಂಡಿತ ಈ ಕಾಲದ ಅಗತ್ಯ.

—ಆಯೇಷಾ, ಯಲ್ಲಾಪುರ

ಇಡೀ ಸಂಚಿಕೆ ತುಂಬ ವಿಶೇಷ ಅನ್ನಿಸಿತು. ಅದಕ್ಕೆ ಕಾರಣ ವಿವಿಧ ರಂಗಗಳಲ್ಲಿ ವಿಶೇಷ ಸಾಧನೆಗೈದ ಮಹಿಳೆಯರ ಕುರಿತು ಅನೇಕ ಲೇಖನಗಳನ್ನು ಒಳಗೊಂಡಿರುವುದು. ಹಲವು ಮಹಿಳೆಯರು ಚಿರಪರಿಚಿತರು ಮತ್ತೆ ಹಲವರು ಈ ಲೇಖನಗಳ ಮೂಲಕ ಪರಿಚಯವಾಗಿದ್ದಾರೆ. ಅವರ ಅನುಪಮ ಸಾಧನೆ ಮೆಚ್ಚುವಂತಹುದು. ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯ ದೊರಕಿ ಅವರಿಗೆ ಅವರದೇ ಸ್ಥಾನಮಾನ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಶೀಘ್ರವಾಗಿ ದೊರಕಿ ಅವರು ಪುರುಷರಿಗೆ ಸರಿಸಮವಾಗಿ ನಿಲ್ಲಲು ಹೆಚ್ಚು ಕಾಲ ಬೇಕಿಲ್ಲ ಎನ್ನುವುದು ನನ್ನ ಅಭಿಮತ.

—ಎಸ್.ಪ್ರಭಾ,ಬೆಂಗಳೂರು

ಮಹಿಳಾ ಸಬಲೀಕರಣದ ವಿಷಯ ಕೇವಲ ನಗರ, ಪಟ್ಟಣಗಳಿಗೆ ಸೀಮಿತವಾಗಿರಬಾರದು. ಹಳ್ಳಿಗಳಲ್ಲಿನ ಎಷ್ಟೋ ಮಹಿಳೆಯರು ಸಬಲೀಕರಣದ ಕಲ್ಪನೆಯೂ ಇಲ್ಲದೆಯೇ ಶೋಷಣೆಗೆ ಒಳಗಾಗುತ್ತಿದ್ದಾರೆ. ಹಾಗಾಗಿ ಎಲ್ಲ ಪ್ರದೇಶಗಳಲ್ಲೂ ಆಮೂಲಾಗ್ರ ಬದಲಾವಣೆ ಅಗತ್ಯ ಇದೆ. ಗುರಿ ತಲುಪುವ ತನಕ ಅವ್ಯಾಹತವಾಗಿ ಶ್ರಮಿಸಬೇಕಷ್ಟೆ.

—ಅರವಿಂದ ಜಿ.ಜೋಷಿ, ಮೈಸೂರು

## ಅಗಾಸ್ಸಿಯ ಶಿಕ್ಷಣ ಸೇವೆ

ಸೆಲೆಬ್ರಿಟಿ ಅಂಕಣದಲ್ಲಿ 'ಬಿಂದು' ಬರೆದ ಲೇಖನ ಓದಿ ಖುಷಿಯಾಯ್ತು. ಅಗಾಸ್ಸಿ ತಮ್ಮ ನಿವೃತ್ತಿಪೂರ್ವ ದಿನಗಳಲ್ಲಿ ಟೆನಿಸ್‌ನಲ್ಲಿ ಉನ್ನತಮಟ್ಟದ ಸಾಧನೆ ಮಾಡಿದ್ದರು. ಅದರಿಂದ ಗಳಿಸಿದ ಸಂಪತ್ತನ್ನು ಡಿಸ್‌ಲೆಕ್ಸಿ ಪೀಡಿತ ಮಕ್ಕಳ ಕಲಿಕೆಗೆ ಶಾಲೆಗಳು ಹಾಗೂ ಶಿಕ್ಷಣದಲ್ಲಿ ಹಿಂದುಳಿದ ಮಕ್ಕಳ ಏಳಿಗೆಗೆ ವಿನಿಯೋಗಿಸಿರುವುದು ಸಮಾಜಕ್ಕೆ ಅತ್ಯುತ್ತಮ ಮಾದರಿಯಾಗಿದೆ.

— ಸುಂದರ್, ಬೆಂಗಳೂರು



## ಪರಶಿವನ ಮಾತು ಕೇಳಿ

ಡಿ.ಎಂ. ಘನಶ್ಯಾಮ ಅವರು ಬರೆದಿರುವ 'ಸುಖ ಸಂಸಾರಕ್ಕೆ ಶಿವಸೂತ್ರಗಳು' ಆಸಕ್ತಿದಾಯಕವಾಗಿದ್ದವು. ಮಹಾಭಾರತದ ಭಾಗವಾಗಿರುವ ಈ ಸಂವಾದ ಇಂದಿನ ನಮ್ಮ ಆಧುನಿಕ ದಾಂಪತ್ಯಜೀವನದಲ್ಲೂ ನೆಮ್ಮದಿಯ ಕೀಲಿ ಕೈಯಂತೆಯೇ ಕೆಲಸ ಮಾಡುತ್ತವೆ. ಅಂತಾದರೆ ಮನುಷ್ಯನ ಮೂಲಗುಣಗಳು ಬದಲಾಗಿಲ್ಲ ಅಲ್ಲವೇ?

—ಜಗದೀಶ್, ಬೆಳಗಾವಿ

## 'ದೊಡ್ಮನೆ' ಅಮ್ಮಂದಿರು

ಮಹಿಳಾದಿನದ ವಿಶೇಷ ಸಂದರ್ಭಕ್ಕೆ ತಕ್ಕಂತೆ ಬಂದಿರುವ ಬರಹಗಳ ಜೊತೆಗೆ 'ದೊಡ್ಮನೆ ಅಮ್ಮಂದಿರ' ಬಗೆಗೆ ರಾಘವೇಂದ್ರ ರಾಜ್‌ಕುಮಾರ ಅವರು ಬಿಚ್ಚು ಮನಸ್ಸಿನಿಂದ ಆಡಿರುವ ಮಾತುಗಳು ವಿಶೇಷವಾಗಿ ಗಮನ ಸೆಳೆದವು. ರಾಜ್ ಕುಟುಂಬದ ಅಮ್ಮಂದಿರ ಬಗೆಗೆ ಅವರಿಗಿರುವ ಗೌರವ, ಕಾಳಜಿ, ಪ್ರೀತಿ, ವಿಶ್ವಾಸದ ಧನ್ಯತೆಯ ಭಾವ ವ್ಯಕ್ತವಾಗಿರುವ ರೀತಿ ಇಡೀ ಸಂಚಿಕೆಯ ವಿಶೇಷವನ್ನು ಹೆಚ್ಚಿಸಿದೆ.

—ವಿಭಾ ಮುರಳೀಧರ, ತುಮಕೂರು

## ಇಂಡೋನೇಷ್ಯಾದಲ್ಲಿ ಆನೆ ಶಾಲೆ



'ಮಹತಿ' ಬರೆದ ಲೇಖನಕ್ಕೆ ಅಭಿನಂದಿಸುತ್ತ ನನ್ನ ಒಂದೆರಡು ಸಾಲುಗಳ ಅನಿಸಿಕೆಗಳು ಇಲ್ಲಿವೆ. ಭಾರತ ಹಾಗೂ ಇಂಡೋನೇಷ್ಯಾ ದೇಶದ ಅರಣ್ಯ ವಿಸ್ತೀರ್ಣಕ್ಕೂ, ಕಾಡಾನೆಗಳ ಸಂತತಿಗೂ, ಕಾಡು ಪ್ರಾಣಿಗಳ ವೈವಿಧ್ಯಕ್ಕೂ, ಅರಣ್ಯಭೂಮಿಯ ಅಕ್ರಮಕ್ಕೂ ಅಜಗಜಾಂತರವಿದೆ. ರಾಜ್ಯನೀತಿಗಳಲ್ಲಿನ ದ್ವಂದ್ವಗಳು ಮಾನವಕಾಡು ಪ್ರಾಣಿಗಳ ಸಂಘರ್ಷಕ್ಕೆ ಕಾರಣವಾಗಿವೆ. ಪರಿಸ್ಥಿತಿ ಉಲ್ಬಣವಾದ ನಂತರ ಪರಿಹಾರ ಸುಲಭ ಸಾಧ್ಯವಲ್ಲ ಎಂಬುದು ಲೇಖನದ ಮೂಲ ಅಂಶ. ಅಮಾಯಕ ಪ್ರಾಣಿಗಳೊಟ್ಟಿಗಿನ ಈ ಸಂಘರ್ಷದ ನಿವಾರಣೆಗೆ ಜನಸಾಮಾನ್ಯರ ಸಹಕಾರವೂ ಅಗತ್ಯವಾಗಿದೆ.

—ನಳಿನಿ ಆರ್. ಮಾಗಲ್, ಸಕಲೇಶಪುರ

## ಅಚ್ಚುಮೆಚ್ಚಿನ ಸುಧಾ

'ನಾನು ಓದುವ ಪತ್ರಿಕೆಗಳಲ್ಲಿ 'ಸುಧಾ' ನನ್ನ ಅಚ್ಚುಮೆಚ್ಚಿನ ಪತ್ರಿಕೆ. ಪ್ರಥಮ ಸಂಚಿಕೆಯಿಂದ ಇಲ್ಲಿಯವರೆಗೆ ಎಲ್ಲವನ್ನೂ ಓದಿದ್ದೇನೆ. 'ಸುಧಾ' ನೆನಪಿಗಾಗಿ ಮದುವೆ ವೇಳೆಯಲ್ಲಿ ನನ್ನ ಹೆಂಡತಿಯ ಹೆಸರನ್ನು 'ಸುಧಾ' ಎಂದು ಬದಲಾಯಿಸಿಕೊಂಡಿದ್ದೇನೆ!

—ಸುಭಾಷ್ ಟಿ. ಕೋಟಿ, ಗದಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in